# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 544 (505)
2. ಸದಸ್ಯರ ಹೆಸರು : ಶ್ರೀ ಬಿ.ಜಿ ಪಾಟೀಲ್
3. ಉತ್ತರಿಸಬೇಕಾದ ದಿನಾಂಕ : 14.08.2025
4. ಉತ್ತರಿಸಬೇಕಾದ ಸಚಿವರು : ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕಲಬುರಗಿ ಜಿಲ್ಲೆಯ ಅಫಜಲ್‌ಪುರ ತಾಲ್ಲೂಕಿನ ಘೂಳನೂರ ಹಾಗೂ ಜೇವರ್ಗಿ ತಾಲ್ಲೂಕಿನ ಮೋಗನ ಇಟಗಾ ಗ್ರಾಮಗಳ ನಡುವೆ ಭೀಮಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದ ಕಾಮಗಾರಿ ಯಾವ ಹಂತದಲ್ಲಿದೆ; ಸದರಿ ಕಾಮಗಾರಿಗಾಗಿ ಖರ್ಚು ಮಾಡಿರುವ ಹಣ ಎಷ್ಟು; | ಕಲಬುರಗಿ ಜಿಲ್ಲೆ ಅಫಜಲಪೂರ ತಾಲ್ಲೂಕಿನ ಘೋಳನೂರ ಹಾಗೂ ಜೇವರ್ಗಿ ತಾಲ್ಲೂಕಿನ ಮೊಗನ ಇಟಗಾ ಗ್ರಾಮಗಳ ನಡುವೆ ಭೀಮಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯು ಗೇಟ್‌ಗಳನ್ನು ಅಳವಡಿಸುವ ಕಾಮಗಾರಿ ಹೊರತುಪಡಿಸಿ, ಉಳಿದ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಗೆ ಇದುವರೆಗೆ ರೂ 7903.67 ಲಕ್ಷ ವೆಚ್ಚ ಮಾಡಲಾಗಿದೆ. |
| ಆ. | ಬ್ಯಾರೇಜ್ ನಿರ್ಮಿಸುವಾಗ ನದಿ ಪಕ್ಕದ ರೈತರಿಗೆ ಎಷ್ಟು ಪರಿಹಾರ ನೀಡುವುದಾಗಿ ಸರ್ಕಾರ ಆಶ್ವಾಸನೆ ನೀಡಿತ್ತು; ರೈತರಿಗೆ ಪರಿಹಾರದ ಹಣ ನೀಡಲಾಗಿದೆಯೇ; ನೀಡದಿದ್ದಲ್ಲಿ ಕಾರಣವೇನು; | ಸದರಿ ಕಾಮಗಾರಿಯ ಎಡ ಭಾಗದ ಗ್ರಾಮವಾದ ಅಫಜಲಪೂರ ತಾಲ್ಲೂಕಿನ ಘೋಳನೂರ ಗ್ರಾಮದ 7 ಎಕರೆ 5 ಗುಂಟೆ ಜಮೀನು ಭೂಸ್ವಾಧೀನಪಡಿಸಿಕೊಂಡು, ವಿಶೇಷ ಭೂಸ್ವಾಧೀನಾಧಿಕಾರಿಗಳು, ಕಲಬುರಗಿ ರವರ ಐತೀರ್ಪಿನ ಪ್ರಕಾರ ರೂ 78.72 ಲಕ್ಷ ಭೂ ಪರಿಹಾರವನ್ನು ನೀಡಲಾಗಿದೆ.<br><br>ಸದರಿ ಕಾಮಗಾರಿಯ ಬಲ ಭಾಗದ ಗ್ರಾಮವಾದ ಜೇವರ್ಗಿ ತಾಲ್ಲೂಕಿನ ಮೋಗನ ಇಟಗಾ ಗ್ರಾಮದ 6 ಎಕರೆ 36 ಗುಂಟೆ ಜಮೀನು ಭೂಸ್ವಾಧೀನವಾಗಿದ್ದು, ವಿಶೇಷ ಭೂಸ್ವಾಧೀನಾಧಿಕಾರಿಗಳು ಕಲಬುರಗಿ ರವರ ಐತೀರ್ಪು ಪ್ರಕಾರ ರೂ 60.54 ಲಕ್ಷ ಪರಿಹಾರದ ಮೊತ್ತವಾಗಿರುತ್ತದೆ. ಇದರಲ್ಲಿ ಮುಂಗಡ ಠೇವಣಿ ಮೊತ್ತ ರೂ 32.90 ಲಕ್ಷವನ್ನು ಈಗಾಗಲೇ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕಲಬುರಗಿ ರವರಿಗೆ ಸಂದಾಯ ಮಾಡಲಾಗಿದ್ದು, ಐತೀರ್ಪು ಬಾಕಿ ಮೊತ್ತ ರೂ 27.64 ಲಕ್ಷವನ್ನು ಅನುದಾನದ ಲಭ್ಯತೆಯ ಮೇರೆಗೆ ಸಂದಾಯ ಮಾಡಲು ಕ್ರಮವಹಿಸಲಾಗುವುದು. |

| | | |
|---|---|---|
| ಇ. | ಘೂಳನೂರ ಬ್ಯಾರೇಜ್‌ಗೆ ಗೇಟ್ ಅಳವಡಿಸಿ ಉಳಿದ ಕಾಮಗಾರಿ ಕೆಲಸಗಳನ್ನು ಪೂರ್ಣಗೊಳಿಸಿ ನೀರು ನಿಲ್ಲುವಂತೆ ಮಾಡಿ ಬ್ರಿಡ್ಜ್ ಕಂ ಬ್ಯಾರೇಜ್‌ನ ಉದ್ಘಾಟನೆಯನ್ನು ಯಾವಾಗ ಮಾಡಲಾಗುವುದು? (ವಿವರ ನೀಡುವುದು) | ಪ್ರಸ್ತುತ ಭೀಮಾ ನದಿಯಲ್ಲಿ ಪ್ರವಾಹ ಪರಿಸ್ಥಿತಿ ಇರುವುದರಿಂದ ಗೇಟ್ ಅಳವಡಿಸುವ ಕಾಮಗಾರಿ ಬಾಕಿ ಉಳಿದಿದ್ದು, ಮಳೆಗಾಲ ಮುಕ್ತಾಯವಾಗಿ ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ತಗ್ಗಿದ ನಂತರ ಗೇಟ್‌ಗಳನ್ನು ಅಳವಡಿಸಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುವುದು. |

**ಕಡತ ಸಂಖ್ಯೆ:** MID 61 LCQ 2025

**(ಎನ್.ಎಸ್ ಭೋಸರಾಜು)**
ಸಣ್ಣ ನೀರಾವರಿ, ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು